# ಒಣ ಮೀನಿನ ತಾಣ

ಇಂತಹ ಜೋಪಡಿ ಕರಾವಳಿಯ ತೀರ ಪ್ರದೇಶದಲ್ಲಿ ನೋಡಲು ಸಿಗುತ್ತದೆ. ಮೀನುಗಾರ ಮಹಿಳೆಯರು ಹಸಿ ಮೀನು ಕೊಂಡು, ಸಂಸ್ಕರಿಸಿ ಉಪ್ಪು ನೀರಿನಲ್ಲಿ ನೆನೆಸಿಟ್ಟು, ನಂತರ ಒಣಗಿಸಿ ಎಲ್ಲೆಲ್ಲಿಗೋ ಕಳಿಸಿ ಹಸಿದವರಿಗೆ ಉತ್ತಮ ಒಣ ಮೀನು ಕೊಡುವ ತಾಣವಿದು. ಇದನ್ನು 'ಕವನ್' ಎಂದು ಕರೆಯುತ್ತಾರೆ.

■ **ಚಂದ್ರಕಲಾ, ಗಂಗೊಳ್ಳಿ**





# ಗಣಪತಿ ಮಾಡ

ಈ ಹಿಂದೆ ಮನೆಗಳಲ್ಲಿ 'ಗಣಪತಿ ಮಾಡ' ಅಂತಾ ಇರುತ್ತಿತ್ತು. ಗಣೇಶ ಚತುರ್ಥಿಯಂದು ಅದಕ್ಕೆ  ಬಣ್ಣದ ಕಾಗದದಿಂದ ಶೃಂಗಾರ ಮಾಡಿ, ಅದರಲ್ಲಿ ಗಣೇಶನನ್ನು ಕೂರಿಸಿ ಪೂಜಿಸುತ್ತಿದ್ದರು. ಆದರೆ ಈಗ ಅದು ಕಡಿಮೆಯಾಗಿದೆ. ಹುನಗುಂದ ಪಟ್ಟಣದ ದಿ. ವೀರನಗೌಡ ಬಿ. ಪಾಟೀಲ (ಗೌಡ್ರು) ಅವರ ಮನೆಯಲ್ಲಿ ಸುಮಾರು 60 ವರ್ಷದ ಹಿಂದಿನ ಮಂಟಪ ಈಗಲೂ ಇದೆ.

■ **ಮಹಾಂತೇಶ ಎಸ್. ಪಾಟೀಲ, ಹುನಗುಂದ**

# ಟಿಫನ್ ಬಾಕ್ಸ್ ಸಂಗ್ರಹ

ಸಿಂಗಪುರಕ್ಕೆ ಹೋದರೆ ನೋಡಲೇಬೇಕಾದ ಪ್ರೇಕ್ಷಣೀಯ ಸ್ಥಳಗಳು ಹಲವಾರು ಇವೆ. ಅವುಗಳಲ್ಲಿ ಮರೀನಾ ಗಾರ್ಡನ್ಸ್ ಬೈ ದ ಬೇನಲ್ಲಿರುವ (Gardens by the Bay) ಫ್ಲವರ್ ಡೋಮ್ ಸಹ ಒಂದು. ಪೂರ್ತಿ ಏರ್ ಕಂಡೀಷನ್‌ನಲ್ಲಿರುವ ಇಲ್ಲಿಯ ಗ್ಲಾಸ್ ಗ್ರೀನ್ ಹೌಸ್ ಗಾರ್ಡನ್ ಬಲು ಅಪರೂಪದ ಹೂ ತೋಟ. ಬೇರೆ ಬೇರೆ ದೇಶಗಳ ಸಾವಿರಾರು ಹೂಗಿಡಗಳೊಂದಿಗೆ ಆಕರ್ಷಕ ವಸ್ತುಗಳ ಸಂಗ್ರಹವನ್ನೂ ಮಾಡಿದ್ದಾರೆ. ಪಿಂಗಾಣಿಯಲ್ಲಿ ತಯಾರಿಸಿದ ಟಿಫನ್ ಬಾಕ್ಸ್, ಪಾತ್ರೆಗಳು... ನೋಡಲು ಬಹಳ ಖುಷಿ ನೀಡುತ್ತವೆ. ಬಣ್ಣ ಬಣ್ಣದ ಹೂ ಚಿತ್ರವಿರುವ ಇವುಗಳ ದೊಡ್ಡ ಸಂಗ್ರಹವೇ ಅಲ್ಲಿದೆ.

■ **ಶರತ್ ಯಾಜಿ, ಶಿರಾಲಿ**

